**C**

**SL. No. : YY**

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]
**ಸಂಕೇತ ಸಂಖ್ಯೆ : 33-K**

**CCE PF**
**CCE PR**
**REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8
**Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

ದಿನಾಂಕ : 27. 03. 2019 ] [ Date : 27. 03. 2019
ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ] [ Time : 9-30 A.M. to 12-15 P.M.
ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೂರಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 14 × 1 = 14

1. ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು ?
2. ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ ?
3. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ ?
4. ಸಸ್ತನಿಗಳ ಆಶ್ರಯದಾಣಗಳು ಯಾವುವು ?
5. ಗುರುಗಳು ಕಾಫೀ–ಕಪ್ಪು ವಿಷಯದಲ್ಲಿ ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದ್ದಾರೆ ?
6. ಲಂಡನ್‌ನಲ್ಲಿರುವ ವ್ಯಾಕ್ಸ್ ಮ್ಯೂಸಿಯಂಗೆ ಟುಸ್ಸೋಡ್ ಎಂಬ ಹೆಸರು ಹೇಗೆ ಬಂದಿತು ?
7. ಗೋಪಾಲನ ಗೆಳೆಯರ ಹೆಸರೇನು ?
8. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು ?
9. ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಯಾವುದು ?
10. ಸಿದ್ಧಾರ್ಥ ಯಾವುದರ ಮೋಹವನ್ನು ತೊರೆದನು ?
11. ಕವಿ ಮಾನವನ ಬದುಕನ್ನು ಇಬ್ಬನಿಗೆ ಏಕೆ ಹೋಲಿಸಿದ್ದಾರೆ ?
12. ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರು ?
13. ಸಿದ್ಧರಾಮನ ಪ್ರಕಾರ ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕು ?
14. ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 15 × 2 = 30

15. ಮರವನ್ನು ಬಿಟ್ಟುಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು ?
16. ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು ?
17. ಪೆನ್ನು ಏಕೆ ಖಡ್ಗಕ್ಕಿಂತ ಹರಿತವಾದುದು ?
18. ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ ?
19. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ?
20. ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ ?
21. ಹೆಡ್ ಮಾಸ್ತರರ ಬಳಿ ಹಿರಿಯ ವಿದ್ಯಾರ್ಥಿಗಳು ಹೇಳಿಕೊಳ್ಳುತ್ತಿದ್ದ ವಿಚಾರಗಳು ಯಾವುವು ?

22. ತನ್ನ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು ?

23. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ ?

24. ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತ್ತಿತ್ತು ?

25. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ ?

26. ಬಾಹ್ಯ ಹಾಗೂ ಆಂತರಿಕ ನಡವಳಿಕೆಗಳಲ್ಲಿ ಸಾಮ್ಯತೆ ಇರಬೇಕೆಂದು ಸಿದ್ಧರಾಮನು ತನ್ನ ವಚನದಲ್ಲಿ ಹೇಗೆ ಪ್ರತಿಪಾದಿಸಿದ್ದಾನೆ ?

27. 'ಕಾದು ನಡೆ' ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು ?

28. ಕಳ್ಳರ ಗುರುವಿನ ಮನಃಪರಿವರ್ತನೆ ಹೇಗಾಯಿತು ?

29. ಮನುಕುಲದ ಭವ್ಯ ಬದುಕು ಹೇಗೆ ಅರಳಬೇಕಿದೆ ಎಂದು ಕವಯಿತ್ರಿ ಹೇಳಿದ್ದಾರೆ ?

30. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಯುಗದ ಹಿಂದಿನ ........................................................
........................................................................
........................................................................
............................................................ ಸವಿಚೈತ್ರವು.

***ಅಥವಾ***

ಕೊರಡ ಕೊನರಿಸಿ ........................................................
........................................................................
........................................................................
............................................................ ಮತ್ತೇರಿದೆ.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

31. ರಮೇಶಗೌಡ ಎಂ.ಕೆ.

32. ಬಸವರಾಜ ಸಬರದ

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ :** 4 × 3 = 12

33. "ಏನಾದರೂ ವರವನ್ನು ಕೇಳು ಕೊಡುತ್ತೇನೆ"

34. "ಅಮ್ಮನ ಮಾತು ಸುಳ್ಳಾಗಲಾರದು!"

35. "ಪರಹಿತಕೆ ಬಳಲುತಿರಲದುವೆ ಜೀವನವು"

36. "ಶಿವಶಿವ ಕಾದಿಗೆಲಿದೆವು"

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

37. ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂನ ವಿಶೇಷತೆಯನ್ನು ಬರೆಯಿರಿ.

***ಅಥವಾ***

ಥೇಮ್ಸ್ ನದಿಯ ಸುತ್ತಮುತ್ತ ಲೇಖಕರು ಕಂಡ ದೃಶ್ಯಗಳನ್ನು ವಿವರಿಸಿ.

38. 'ಗುರಿ' ಪದ್ಯದ ಸಂದೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

***ಅಥವಾ***

ನೀವು ಮೆಚ್ಚಿಕೊಂಡ 'ಗುರಿ' ಪದ್ಯದಲ್ಲಿನ ಮೌಲ್ಯಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 4 × 1 = 4

ಮನಸ್ಸು ರೋಗವನ್ನು ಸೃಷ್ಟಿಸಬಲ್ಲದು, ಗುಣಪಡಿಸಲೂ ಬಲ್ಲದು! ತಾಳ್ಮೆ, ಪ್ರೀತಿ, ಕರುಣೆ, ದಾನಬುದ್ಧಿ, ನಿಸ್ವಾರ್ಥ ಸೇವಾ ಮನೋಭಾವ – ಇವೇ ಮೊದಲಾದ ರಚನಾತ್ಮಕ ಭಾವನೆಗಳು ದೇಹ–ಯಂತ್ರದ ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುತ್ತವೆ. ನಮ್ಮಲ್ಲಿ ಸಂತೋಷ, ತೃಪ್ತಿ ಹಾಗೂ ಸೃಜನಶೀಲ ಪ್ರವೃತ್ತಿಗಳನ್ನು ಎಚ್ಚರಗೊಳಿಸುತ್ತವೆ. ಹಾಗೆಯೇ ನಿಷೇಧಮಯ ಭಾವನೆಗಳಿಂದ ಭಯ, ಚಿಂತೆ, ದ್ವೇಷ, ಅಸೂಯೆ, ಸೋಲಿನ ಮನೋಭಾವ ಹಾಗೂ ಸಂಕುಚಿತ ಸ್ವಾರ್ಥದ ನಾನಾ ಅವತಾರಗಳು ಸಮಸ್ತ ದೇಹ ಮತ್ತು ಅಂಗಾಂಗಗಳಿಗೆ ಕೆಡಕನ್ನುಂಟು ಮಾಡಿ ರೋಗಕ್ಕೆ ಕಾರಣವಾಗುತ್ತವೆ. ಪ್ರಸನ್ನತೆ, ಶಾಂತತೆ, ಧೈರ್ಯ, ಆತ್ಮವಿಶ್ವಾಸ, ದೃಢ ನಿಶ್ಚಯ ಇವೇ ಮೊದಲಾದ ಭಾವನೆಗಳು ಶರೀರದ ಸುಸ್ಥಿತಿಗೆ ಆರೋಗ್ಯವರ್ಧಕ ಟಾನಿಕ್ಕಿಗಿಂತಲೂ ಹೆಚ್ಚಿನ ಸಹಾಯ ಮಾಡುತ್ತವೆ! ಮನಸ್ಸಿನಲ್ಲಿ ಉದಿಸುವ ಯೋಚನೆ ಎಂಬ ದ್ರವ್ಯದಿಂದ ವಿಷವನ್ನು ತಯಾರಿಸಬಹುದು, ಅಮೃತವನ್ನೂ ತಯಾರಿಸಬಹುದು. ಮನಸ್ಸು ಕೆಲಸ ಮಾಡುವ ಸೂಕ್ಷ್ಮ ನಿಯಮವನ್ನು ತಿಳಿದುಕೊಂಡರೆ, ಶ್ರದ್ಧೆಯಿಂದ ಶ್ರಮಿಸಿದರೆ ವಿಷವನ್ನೂ ಅಮೃತವನ್ನಾಗಿಸಬಹುದು. ಜಾಡ್ಯಮನೋಭಾವ, ಅನೈಕಾಗ್ರತೆ, ಅವ್ಯವಸ್ಥೆ, ಸಿಡುಕು, ಬಲವಾದ ಪೂರ್ವಾಗ್ರಹಗಳು ಮನಸ್ಸೆಂಬ ಯಂತ್ರವನ್ನು ಹಾಳು ಮಾಡಿ ಬಿಡುತ್ತವೆ. ಕ್ರಮನಿಯಮ, ವ್ಯವಸ್ಥೆ, ತಾಳ್ಮೆ, ಸಮತೋಲನ, ಸದುದ್ದೇಶ, ವ್ಯಾವಹಾರಿಕತೆ – ಇವುಗಳ ಸಹಕಾರದಿಂದ ಯೋಜನೆಗಳನ್ನು ರೂಪಿಸಿಕೊಂಡರೆ ನಮ್ಮನ್ನು ದುರ್ಬಲಗೊಳಿಸುವ, ದುರಂತಕ್ಕೆಳಸುವ ನಿಷೇಧಾತ್ಮಕ ಭಾವನೆಗಳು ಸಮೀಪ ಸುಳಿಯಲಾರವು.

*ಪ್ರಶ್ನೆಗಳು :*

39. ಮನಸ್ಸು ವಿಷವನ್ನು ಹೇಗೆ ಅಮೃತವನ್ನಾಗಿಸುತ್ತದೆ ?

40. ವ್ಯಕ್ತಿಯಲ್ಲಿ ನಿಷೇಧಾತ್ಮಕ ಭಾವನೆಗಳು ಯಾವಾಗ ಸಮೀಪ ಸುಳಿಯುವುದಿಲ್ಲ ?

41. ರಚನಾತ್ಮಕ ಭಾವನೆಗಳು ನಮ್ಮಲ್ಲಿ ಯಾವ ಪ್ರವೃತ್ತಿಗಳನ್ನು ಎಚ್ಚರಗೊಳಿಸುತ್ತವೆ ?

42. ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುವ ರಚನಾತ್ಮಕ ಭಾವನೆಗಳು ಯಾವುವು ?

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

43. 'ಬೇರೊಬ್ಬ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಆಗಮ ಸಂಧಿ (ಬಿ) ಲೋಪ ಸಂಧಿ

(ಸಿ) ಆದೇಶ ಸಂಧಿ (ಡಿ) ಗುಣ ಸಂಧಿ

44. 'ಒಗ್ಗಟ್ಟು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಕರ್ಮಧಾರಯ ಸಮಾಸ (ಬಿ) ತತ್ಪುರುಷ ಸಮಾಸ

(ಸಿ) ಬಹುವ್ರೀಹಿ ಸಮಾಸ (ಡಿ) ದ್ವಿಗು ಸಮಾಸ

45. "ಸೀತೆಯ ಮುಖಕಮಲ ಅರಳಿತು" – ಈ ವಾಕ್ಯದಲ್ಲಿರುವ ಅಲಂಕಾರ

(ಎ) ರೂಪಕಾಲಂಕಾರ (ಬಿ) ಉಪಮಾಲಂಕಾರ

(ಸಿ) ಉತ್ಪ್ರೇಕ್ಷಾಲಂಕಾರ (ಡಿ) ದೃಷ್ಟಾಂತಾಲಂಕಾರ

46. 'ನೂಕಲು' ಪದಕ್ಕೆ ಪ್ರಸ್ತಾರ ಹಾಕಿದಾಗ ಮಾತ್ರೆಗಳ ಸಂಖ್ಯೆ

(ಎ) ಆರು ಮಾತ್ರೆ (ಬಿ) ಐದು ಮಾತ್ರೆ

(ಸಿ) ನಾಲ್ಕು ಮಾತ್ರೆ (ಡಿ) ಮೂರು ಮಾತ್ರೆ

47. 'ಕಾರ್ಯ' ಪದದ ತದ್ಭವರೂಪ

(ಎ) ಕಜ್ಜ (ಬಿ) ಕರ್ಜ

(ಸಿ) ಕಾರಯ (ಡಿ) ಕಾಯ

48. 'ವೈಪರಿತ್ಯ' ಪದದ ಅರ್ಥ

(ಎ) ಅಪಘಾತ (ಬಿ) ಹೊಂದಾಣಿಕೆ

(ಸಿ) ಒಗ್ಗಟ್ಟು (ಡಿ) ವಿರೋಧ

49. 'ಜೀವನದಲ್ಲಿ' ಪದದಲ್ಲಿರುವ ವಿಭಕ್ತಿ

(ಎ) ದ್ವಿತೀಯಾ
(ಬಿ) ಸಪ್ತಮಿ
(ಸಿ) ಪ್ರಥಮಾ
(ಡಿ) ತೃತೀಯಾ

50. 'ಹೋಗುವನು' ಕ್ರಿಯಾಪದ ಈ ಕಾಲದಲ್ಲಿದೆ

(ಎ) ಭೂತಕಾಲ
(ಬಿ) ವರ್ತಮಾನಕಾಲ
(ಸಿ) ಭವಿಷ್ಯತ್‌ಕಾಲ
(ಡಿ) ಗತಕಾಲ

51. 'ವಿಜ್ಞಾನಿ' ಪದವು ಈ ಗುಂಪಿಗೆ ಸೇರುತ್ತದೆ

(ಎ) ರೂಢನಾಮ
(ಬಿ) ಅನ್ವರ್ಥನಾಮ
(ಸಿ) ಅಂಕಿತನಾಮ
(ಡಿ) ಸರ್ವನಾಮ

52. ಅನುಕರಣಾವ್ಯಯಕ್ಕೆ ಉದಾಹರಣೆಯಾದ ಪದ

(ಎ) ಗಿಡಗಂಟೆ
(ಬಿ) ಬೇಗಬೇಗ
(ಸಿ) ಕಟ್ಟಕಡೆ
(ಡಿ) ಜುಳುಜುಳು

53. ಗ್ರಾಂಥಿಕ ರೂಪದಲ್ಲಿರುವ ಪದ

(ಎ) ಕೂಡ್ರಿಸಿ
(ಬಿ) ಬರ್ತಾನೆ
(ಸಿ) ನೋಡುವವರಿಗೆ
(ಡಿ) ಬಿಡುತಾವೆ

54. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ

(ಎ) ಹತ್ತು
(ಬಿ) ಏಳು
(ಸಿ) ಐದು
(ಡಿ) ಒಂಬತ್ತು

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

55. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $1 \times 3 = 3$

* ಹಕ್ಕಿಗಳಿಗೆ ಗೂಡು; ಮಕ್ಕಳಿಗೆ ತಾಯಿ
* ಕಾಯಕವೇ ಕೈಲಾಸ
* ಬೆಳೆಯುವ ಸಿರಿ ಮೊಳಕೆಯಲ್ಲಿ

56. ನಿಮ್ಮನ್ನು ಚಿಕ್ಕೋಡಿಯ ಸರ್ಕಾರಿ ಪ್ರೌಢಶಾಲೆಯ 'ಅರುಣ' ಎಂದು ಭಾವಿಸಿಕೊಂಡು, ವಾರ್ಷಿಕ ಪರೀಕ್ಷೆಯ ಸಿದ್ಧತೆಯನ್ನು ಕುರಿತು ಕೂಡಲಸಂಗಮದ ಶರಣ ಬಸವೇಶ್ವರ ಪ್ರೌಢಶಾಲೆಯ 'ಗಿರೀಶ' ಎಂಬ ಗೆಳೆಯನಿಗೆ ಪತ್ರವೊಂದನ್ನು ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ರಾಯಚೂರಿನ ಸರ್ಕಾರಿ ಪ್ರೌಢಶಾಲೆಯ 'ರಮ್ಯಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಕುಡಿಯುವ ಶುದ್ಧನೀರಿನ ಸೌಲಭ್ಯವನ್ನು ಮಾಡಿಕೊಡುವಂತೆ ಕೋರಿ ಶಾಲೆಯ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರ ಬರೆಯಿರಿ.

57. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

* ಕೆರೆಗಳ ಮಹತ್ವ
* ಬಾಲ್ಯವಿವಾಹ ಒಂದು ಸಾಮಾಜಿಕ ಪಿಡುಗು
* ದೂರದರ್ಶನದಿಂದಾಗುವ ಪ್ರಯೋಜನಗಳು